POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 16.11.2025

# ಜನುಮ ಜನುಮದ ಅನುಬಂಧ...

ಟೈಟಲ್ ಕಾರ್ಡ್ ನೋಡಿ ಇದೇನಪ್ಪ ಸಾಕ್ಷಾತ್ಕಾರ ಸಾಂಗ್ ಹಾಕವ್ರೆ ಅಂತ ಕನೂಫ್ಯೂಸ್ ಆಗಬೇಡಿ. ಸಿಂಪಲ್ ಸುನಿ ನ್ಯೂ ಪಿಚ್ಚರ್ 'ಗತವೈಭವ' ಕೂಡ ಒಂಥರಾ ಹಾಗೆಯೇ ಇದೆ. ಜನುಮ ಜನುಮದ ಅನುಬಂಧ.... ಯಸ್, ಇದು ಪುನರ್ ಜನ್ಮದ ಲವ್ ಸ್ಟೋರಿ. ಒಂದಲ್ಲ ಎರಡಲ್ಲ...ನಾಲ್ಕು ಜನುಮದ ಲವ್ ಸ್ಟೋರಿ! ನಾಯಕ ದುಷ್ಯಂತ್ ನಾಯಕಿ ಆಶಿಕಾ ರಂಗನಾಥ್ ಅವರದ್ದು ನಾಲ್ಕು ಜನುಮಗಳಲ್ಲೂ ನಾಲ್ಕು ತರಹದ ಭಿನ್ನ ಪಾತ್ರ. ಹೀಗಾಗಿ, ಈ ಜೋಡಿ ಚತುರ್ಥ ಪಾತ್ರ ಎಂದರೆ ತಪ್ಪಾಗದು....

ಯುಗ ಯುಗಗಳೆ ಕಳೆದರೂ ಪ್ರೀತಿಯ ಮೌಲ್ಯ ಒಂದೇ. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಇಲ್ಲಿ ನಾಲ್ಕು ಜನ್ಮ ಎತ್ತುವ ಪ್ರೇಮಿಗಳು ಶಾಪಗ್ರಸ್ಥರಾಗಿ ಇನ್ನೊಂದು ಜನ್ಮ ಎತ್ತುವ, ನಂತರ ಮತ್ತೊಂದು ಜನ್ಮ... ಪುಣ್ಯಕ್ಕೆ ಮನುಷ್ಯರಾಗಿಯೇ ಜನ್ಮ ತಳೆಯುವ ಇವರು ಪ್ರತಿ ಜನ್ಮದಲ್ಲೂ ಸಂಧಿಸುವುದು, ಪ್ರೇಮಿಸುವುದು ದೈವ ಸಂಕ್ಷಿಲ್ಪ. ಇದನ್ನು ನಾಲ್ಕು ಕಾಲಘಟ್ಟಗಳಲ್ಲಿ ಚಿತ್ರಿಸಿರುವುದು ಸುನಿ ಅವರ ಸಾಧನೆ. ಇಂತಹ ಸಿನಿಮಾಗೆ ಕೋಟಿ ಕೋಟಿ ಸುರಿದಿರುವ ನಿರ್ಮಾಪಕರ ಧೈರ್ಯವನ್ನ ಮೆಚ್ಚಬೇಕು!

ಈಗಿನ ಮಡಿಕೇರಿಯಲ್ಲಿ ತೋಟಗಾರಿಕೆ ಇಲಾಖೆಯಲ್ಲಿ (ಆರ್ಟಿಕಲ್ಚರ್ ಡಿಪಾರ್ಟ್‌ಮೆಂಟ್) ಕೆಲಸ ಮಾಡುವ ಆಶಿಕಾ ಒಮ್ಮೆ ಫೇಸ್‌ಬುಕ್‌ನಲ್ಲಿ ಓರ್ವ ವ್ಯಕ್ತಿಯ ಚಿತ್ರವನ್ನು ನೋಡಿ ವಿಸ್ಮಿತಳಾಗುತ್ತಾರೆ. ಅತನನ್ನು ಎಲ್ಲೋ ನೋಡಿದ ನೆನಪು ಕಾಡುತ್ತ, ಆ ಚಿತ್ರವನ್ನು ಬಿಡಿಸುತ್ತಾರೆ.

ಈ ಚಿತ್ರ ವೈರಲ್ ಆಗಿ ವಿಎಫ್‌ಎಸ್ ಸ್ಟುಡಿಯೋದಲ್ಲಿ ಟೆಕ್ಕಿಯಾಗಿದ್ದ ದುಷ್ಯಂತ ನೋಡಿ ಬೆರಗಾಗುತ್ತಾನೆ. ಯಾಕೆಂದ್ರೆ ಅದು ಇವನ ತದ್ರೂಪ. ಈತ ಆಶಿಕಾಳನ್ನ ಹುಡುಕುತ್ತ ಸಾಗುತ್ತಾನೆ. ಇದರ ನಡುವೆ ಸಮುದ್ರ ಮಂಥನ... ವಾಸುಕಿ ವೈಭವ... ಹಾಲಿನ ಸಮುದ್ರದಲ್ಲಿ ಸರ್ಪ ಕಾಳಗ... ಸುರ ಅಸುರರ ಆರ್ಭಟ... ಅರಮನೆಯಲ್ಲಿ ರಾಜಕುಮಾರಿ ಹಾಗೂ ರಾಕ್ಷಸನ ನಡುವೆ




ಪ್ರೇಮ. ಇದಕ್ಕೆ ಋಷಿಮುನಿಯ ಶಾಪ ತಟ್ಟಿ ದೊಡ್ಡ ಅನಾಹುತ ಎದುರಾಗುತ್ತದೆ. ಸತ್ತು ಪೋರ್ಚುಗಲ್‌ನಲ್ಲಿ ಜನ್ಮ ತಾಳುವ ಜೋಡಿ, ಅಲ್ಲಿಂದ ವಾಸ್ಕೊಡಗಾಮ ಮೂಲಕ ಮೂಲಕ ಭಾರತಕ್ಕೆ ಸಾಗಿ ಬರುವಾಗ ಸಮಸ್ಯೆಗೆ ಸಿಲುಕಿ ಮತ್ತೆ ದುರಂತ...

ನಂತರ ಕರಾವಳಿಯಲ್ಲಿ ಜನ್ಮ ತಳೆದು ಇಲ್ಲಿನ ಕಂಬಳ ಸಂಸ್ಕೃತಿ ಯಲ್ಲಿ ಮೀಯುತ್ತಾರೆ. ನಾಟಿ ವೈದ್ಯರ ಮಗಳು ಮಂಗಳ ಆಗಿ ಮಿಂಚುವ ಆಶಿಕಾಳನ್ನು ಕೋಣ ಘಳಗಿಸೋ ದುಷ್ಯಂತ ಪ್ರೇಮಿಸುವುದು... ಈ ಪ್ರೇಮಕ್ಕೆ 'ವ್ಯಾಧಿ' ಅಡ್ಡಿ ಬರೋದು...ಮುಂದೇನು? ಅನ್ನೋದಕ್ಕೆ ಕ್ಲೈಮ್ಯಾಕ್ಸ್‌ನಲ್ಲಿ ಸಿಗುತ್ತೆ ಉತ್ತರ! ನಾಲ್ಕು ಜನ್ಮದ ಕತೆಯನ್ನು ಒಂದಕ್ಕೊಂದು ಬೆಸೆದು ಪ್ರೇಮ ಚಿತ್ತಾರ ಮೂಡಿಸುವಲ್ಲಿ ಸುನಿ ಗೆದ್ದಿದ್ದಾರೆ. ಒಟ್ಟಾರೆ, ಎಲ್ಲೂ ಬೋರ್ ಹೊಡೆಸದ ವಿಶಿಷ್ಟ ಪ್ರೇಮ ಕಥಾನಕ ಈ ಗತ ವೈಭವ... ಈ ಚಿತ್ರವನ್ನು ನೋಡ್ತಾ ನೋಡ್ತಾ ಬೇರೊಂದು ಲೋಕಕ್ಕೆ ಹೋಗಿ ಬಂದ ಅನುಭವ ಆಗದಿದ್ರೆ, ಕೇಳಿ! ☯

# ನಕ್ಕು ನಗಿಸುವ 'ಗಿಲ್ಲಿ' ನಟನ ವಿದಾಯದ ಭಾಷಣ!



ಬಿಗ್‌ಬಾಸ್ ಕನ್ನಡ ಸೀಸನ್ 12ರ ಪ್ರಮುಖ ಸ್ಪರ್ಧಿ ಗಿಲ್ಲಿ ನಟ, ಬಿಗ್ ಬಾಸ್ ಮನೆಯ ಮುಖ್ಯ ದ್ವಾರದ ಬಳಿ ನಿಂತು ವಿದಾಯದ ಮಾತುಗಳನ್ನಾಡಿದ್ದಾರೆ! ಸಹ ಸ್ಪರ್ಧಿಗಳಾದ ಕಾವ್ಯಾ ಶೈವ, ಸ್ಪಂದನಾ ಮತ್ತು ಧನುಷ್ ಅವರೊಂದಿಗಿನ ಈ ತಮಾಷೆ ವಿಡಿಯೋ ಭಾರಿ ವೈರಲ್ ಆಗಿದ್ದು, ಸಾಕ್ಷಾತ್ 'ಗಿಲ್ಲಿ' ಫಿನಾಲೆ ತಲುಪುವ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ನಡೆಯುತ್ತಿದೆ!

ಸ್ವಿಮ್ಮಿಂಗ್ ಪೂಲ್‌ನಲ್ಲಿ ಕಾವ್ಯಾ ಶೈವ ಮತ್ತು ಸ್ಪಂದನಾ ಸೋಮಣ್ಣ ಸ್ವಿಮ್ ಮಾಡುತ್ತಿದ್ದಾಗ, ಬಿಗ್‌ಬಾಸ್ ಮನೆಯ ಮುಖ್ಯದ್ವಾರದ ಬಳಿ ನಿಂತ ಗಿಲ್ಲಿ ನಟ, ಗಾರ್ಡನ್ ಏರಿಯಾದಲ್ಲಿರುವ ಎಲ್ಲಾ ಸ್ಪರ್ಧಿಗಳನ್ನು ಕರೆಯುತ್ತಾ ತಮಾಷೆಯಾಗಿ ಬೈ ಬೈ ಹೇಳುತ್ತಾರೆ. ಕಾವು ನಾನು ಮನೆಯಿಂದ ಹೋಗುತ್ತೇನೆ ಎಂದು ಗಿಲ್ಲಿ ನಟ ಹೇಳುತ್ತಾರೆ.

ಇದೀಗ ಮನೆಯಿಂದ ಹೊರಗೆ ಹೋಗುವ ಸಂದರ್ಭದ ಮಾತುಗಳನ್ನು ಗಿಲ್ಲಿ ನಟ ಹೇಳಿದ್ದಾರೆ. ಯಾಕೆ ಏನು ಅಂತ ಕೇಳಬೇಡಿ. ಗಿಲ್ಲಿ ತಮಾಷೆ ಅಂದ್ರೆ, ಇವೆಲ್ಲಾ ಇರುತ್ತವೆ! ಬಿಗ್‌ಬಾಸ್ ಮನೆಯಿಂದ ಹೊರಗೆ ಹೋಗುವಾಗ ಕೊನೆಯಲ್ಲಿ ಏನು ಹೇಳ್ತಿಯಾ... ಪ್ರಿನ್ಸಿಪಾಲ್ ರಘು ಮತ್ತು ಕಾವ್ಯ ಕೇಳುತ್ತಾರೆ. ಈ ಪ್ರಶ್ನೆ ಕೇಳುತ್ತಿದ್ದಂತೆ ಗಿಲ್ಲಿ ಒಂಥರಾ ಮುಖ ಮಾಡಿಕೊಂಡು, ತಮ್ಮ ವಿದಾಯದ ಮಾತುಗಳನ್ನು ತಮಾಷೆಯಾಗಿ ಹೇಳಲು ಆರಂಭಿಸುತ್ತಾರೆ.

'ಐ ಲವ್ ಯು ಬಿಗ್‌ಬಾಸ್. ಈ ಏಳೆಂಟು ವಾರದ ನೆನಪುಗಳನ್ನು ನನ್ನಿಂದ ಮರೆಯೋಕೆ ಆಗಲ್ಲ. ಇಂತಹ ಒಳ್ಳೆಯ ಕ್ಷಣ ನೀಡಿದ ನಿಮಗೆ ಥ್ಯಾಂಕ್ ಯು. ಆಚೆ ನಿಮ ಗೋಸ್ಕರ ಕಾಯುತ್ತಿರುತ್ತೇನೆ. ಫಿನಾಲೆ ಮುಗಿಸ್ಕೊಂಡು ಬನ್ನಿ. ಎಲ್ಲರೂ ಒಂದೆಡೆ ಸೇರೋಣ. ಕಾವು, ಗೊತ್ತು ಗೊತ್ತಿಲ್ಲದೇ ನಾನು ಲೈನ್ ಕ್ರಾಸ್ ಮಾಡಿದ್ರೆ ಬೇಜಾರು ಆಗಬೇಡ... ಕಳ್ಳಪುಟ್ಟಿ ಅಂತ ಹೆಸರಿಟಿದ್ದಕ್ಕೆ ಸ್ಪಂದನಾ ನೀನು ಬೇಸರ ಆಗಬೇಡ.... ಏನಾದ್ರು ಅಂದಿದ್ರೆ ಧನು ಅಣ್ಣಾ ನೀನು ಬೇಸರ ಮಾಡಿಕೊಳ್ಳಬೇಡ. ಕಾವು ನೀನು ಫಿನಾಲೆಯಲ್ಲಿ ಕಪ್ ಹಿಡಿಯೋದನ್ನು ನಾನು ನೋಡಬೇಕು... ಎಂದು ಗಿಲ್ಲಿ ನಟ ಹೇಳುತ್ತಾರೆ.



ಗಿಲ್ಲಿ ನಟ ಇಷ್ಟೆಲ್ಲಾ ಮಾತನಾಡುತ್ತಿರುವಾಗ ಮುಖ್ಯದ್ವಾರದ ಬಳಿಗೆ ಧಾವಿಸಿ ಬರುವ ಧನುಷ್, ಹೋಗಬೇಡ ಬಾ ಎಂದು ಎಳೆಯುತ್ತಾರೆ. ಆಗ ಗಿಲ್ಲಿ, ನಮ್ಮ ಚಂದ್ರಣ್ಣ ಹೋಗಿದ್ದಾರೆ...ನಾನು ಹೋಗಿ ಕೋಳಿ ಫಾರಂ ತೆರೆಯಬೇಕು ಎಂದು ತಮಾಷೆ ಮಾಡುತ್ತಾ ಮುಖ್ಯದ್ವಾರದ ಸಮೀಪ ಹೋಗುತ್ತಾರೆ! ಆಗ ರಘು ಅವರು ನಗುತ್ತಾ ಬಿಗ್ ಬಾಸ್ ನಿಜವಾಗಿಯೂ ಬಾಗಿಲು ಓಪನ್ ಮಾಡಿ ನಿನ್ನನ್ನು ಹೊರಗೆ ಎಳೆದುಕೊಳ್ಳಬೇಕು ನೋಡು ಎಂದು ಹೇಳುತ್ತಾರೆ!

ಹೀಗೆ ತರ್ಲೆ ಮಾಡಿ ಇಡೀ ಬಿಗ್ ಬಾಸ್ ಮನೆಯಲ್ಲಿ ನಗೆ ಬುಗ್ಗೆ ಉಕ್ಕಿಸುತ್ತಿದ್ದಾರೆ ಗಿಲ್ಲಿ ನಟ! ಈ ಮನುಷ್ಯ ಇಲ್ಲಿವರೆಗೆ ಬಂದಿರೋದೇ ಹೆಚ್ಚುಗಾರಿಕೆ, ಇನ್ನು ಫಿನಾಲೆವರೆಗೂ ಇರುತ್ತಾರ ಅನ್ನೋದೇ ಡೌಟ್! ಸೋಶಿಯಲ್ ಮೀಡಿಯಾದಲ್ಲಿ ನೋಡಿದ್ರೆ 'ಗಿಲ್ಲಿ'ಯೇ ಹಾಟ್ ಹೀರೋ....!! ☯

# ದಿ ಟಾಸ್ಕ್ ಟ್ರೇಲರ್ ಮಾಡಿದ ಮೋಡಿಗೆ 200 ಟಾಕೀಸ್ ಫಿದಾ!

ಸ್ಟಾರ್ ನಟರಿಗೆ ಸಂಕಷ್ಟ, ಕನ್ನಡ ಸಿನಿಮಾಗಳು ಬರ್ತಿಲ್ಲ ಅನ್ನೋರಿಗೆ ಉತ್ತರವಾಗಿ ಮೊನ್ನೆ ಶುಕ್ರವಾರ ಹೊಸಬರದ್ದೇ ಎಳೆಂಟು ಚಿತ್ರಗಳು ತೆರೆ ಕಂಡಿವೆ. ನಾಳೆ ನವೆಂಬರ್ 21ಕ್ಕೆ ಮತ್ತೆ ಏಳು ಸಿನಿಮಾ ರಿಲೀಸ್ ಆಗುತ್ತಿವೆ! ಒಂದಕ್ಕಿಂತ ಒಂದು ಭಿನ್ನ ವಿಭಿನ್ನ. ಯಾವ ಚಿತ್ರಕ್ಕೆ ಥೀಯೇಟರ್ ಕೊಡೋದು ಅನ್ನೋದೇ ದೊಡ್ಡ ಸಮಸ್ಯೆಯಾಗಿದೆ ವಿತರಕರಿಗೆ. ಇಂಥ ಸಂದರ್ಭದಲ್ಲಿ ಪ್ರದರ್ಶಕರೆ ಮುಂದೆ ಬಂದು ನಮ್ಮ ಚಿತ್ರಮಂದಿರಕ್ಕೆ ನಿಮ್ಮ ಸಿನಿಮಾ ಕೊಡಿ ಅಂತ ಕೇಳಿದ್ರೆ ಅದೆಷ್ಟು ಖುಷಿ ಆಗಲ್ಲ ಹೇಳಿ! ಇಂತಹದ್ದೊಂದು ಅದೃಷ್ಟ ಸಿಕ್ಕಿರೋದು 'ದಿ ಟಾಸ್ಕ್' ಸಿನಿಮಾಗೆ! ಯಾಕೆಂದ್ರೆ, ಈ ಚಿತ್ರದ ಟ್ರೇಲರ್ ಹುಟ್ಟಿಸಿದ್ದ ಕುತೂಹಲ! ಅದನ್ನು ನೋಡಿ ಫಿದಾ ಆಗಿದ್ದ ಪ್ರದರ್ಶಕರು ಸಿನಿಮಾ ಪ್ರದರ್ಶನ ಮಾಡಲು ಅತ್ಯಂತ ಉತ್ಸುಕರಾಗಿದ್ದಾರೆ!

ಕರ್ನಾಟಕ ರಾಜ್ಯದಾದ್ಯಂತ ಸುಮಾರು 200 ಚಿತ್ರಮಂದಿರಗಳಲ್ಲಿ 'ಟಾಸ್ಕ್' ನೋಡ (ಆಡ)ಬಹುದಾಗಿದೆ! ಮಲ್ಟಿಪ್ಲೆಕ್ಸ್‌ಗಳ ಬಗ್ಗೆ ಹೇಳಬೇಕು ಅಂದ್ರೆ, ಬೆಂಗಳೂರು ಮಹಾನಗರ ಒಂದರಲ್ಲೇ ನೂರು ಚಿಲ್ಲರೆ ಸ್ಕ್ರೀನ್ ಇದ್ದಾವೆ. ಈ ಎಲ್ಲಾ ಕಡೆ 'ದಿ ಟಾಸ್ಕ್' ತೆರೆ ಕಾಣುತ್ತಿದೆ. ಮೊದಲೇ ತಿಳಿಸಿದಂತೆ ಇದು ರಾಘು ಶಿವಮೊಗ್ಗ ನಿರ್ದೇಶನದ ಸಿನಿಮಾ! ಜೈ ಸೂರ್ಯಸಾಗರ್ ಯುವಕರ ಜುಗಲ್ಬಂಧಿ ಗೇಮ್! ಪಾಲಿಟಿಕ್ಸ್....ವಿಡಿಯೋ... ಡೀಲ್...ಪೊಲೀಸ್... ಚೇಸ್... ಕಿಲ್ಲಿಂಗ್... ಫೈಟಿಂಗ್... ಟೋಟಲಿ ಕುತೂಹಲ ಭರಿತ ಚಿತ್ರಕತೆ!! ನವೆಂಬರ್ 21ಕ್ಕೆ ಇನ್ನು ಮೂರೇ ದಿನಗಳಿವೆ...!!! ☯




Vol. 41 No. 24 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==